ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಚಾಮರಾಜನಗರ ತಾಲ್ಲೂಕಿನಲ್ಲಿ ಹೊಂಗನೂರು ಹಿರೇಕೆರೆ ಮತ್ತು ಉಮ್ಮತ್ತೂರು ಕೆರೆ ನಂಜನಗೂಡು ತಾಲ್ಲೂಕಿನಲ್ಲಿ ಹಳೇಪುರ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮವನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಲಾಗಿದೆ.

ಆ)

ಕ್ರ. ಸಂ.	ತಾಲ್ಲೂಕು	ಕೆರೆಯ ಹೆಸರು	ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)
1.	ಚಾಮರಾಜನಗರ ಹಿರೇಕೆರೆ	ಹೊಂಗನೂರು	352.00
2.	ಚಾಮರಾಜನಗರ	ಉಮ್ಮತ್ತೂರು ಕೆರೆ	45.00
3.	ನಂಜನಗೂಡು	ಹಳೇಪುರ ಕೆರೆ	190.00

ಸದರೀ ಕೆರೆಗಳಲ್ಲಿ ಹೂಳೆತ್ತುವ ಕಾಮಗಾರಿಗಳನ್ನು ಈ ಸಾಲಿನಲ್ಲೇ ತೆಗದುಕೊಳ್ಳಲಾಗುವುದು.

ಚಾಮರಾಜನಗರ ತಾಲ್ಲೂಕು ವ್ಯಾಪ್ತಿಗೆ ಬರುವ ಸುವರ್ಣಾವತಿ ಹಾಗೂ ಚಿಕ್ಕಹೊಳೆ ಜಲಾಶಯಗಳಿಗೆ ವಿಶೇಷ ಅನುದಾನ ಬಿಡುಗಡೆ

1245 - ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರಹಳ್ಳಿ) : ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ವ್ಯಾಪ್ತಿಗೆ ಬರುವ ಸುವರ್ಣಾವತಿ ಹಾಗೂ ಚಿಕ್ಕಹೊಳೆ ಜಲಾಶಯಗಳಿಗೆ 1998-99ನೇ ಸಾಲಿನಲ್ಲಿ ಮಾಡಲಾಗಿದೆಯೇ?

ಆ) ಅನುದಾನ ಮೊಬಲಗೆಷ್ಟು ಈಗ ಹಾಲಿ ಜಲಾಶಯಗಳಿಗೆ ನೀಡುತ್ತಿರುವ ಅನುದಾನ ಎಷ್ಟು?

ಇ) ಪ್ರಾರಂಭವಾದಾಗಿನಿಂದ ಈವರೆವಿಗೆ ಅನುದಾನದಲ್ಲಿ ಏನಾದರೂ ಹೆಚ್ಚಳವಾಗಿದೆಯೇ (ವಿವರ ನೀಡುವುದು)?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಯೋಜನೆ ಪ್ರಾರಂಭವಾದಾಗಿನಿಂದ ಪ್ರತಿ ವರ್ಷವೂ ನೀಡುತ್ತಿರುವ ಅನುದಾನದಲ್ಲಿ ಹೆಚ್ಚಳವಾಗಿರುವುದಿಲ್ಲ. ಆದರೆ, ಆಯಾ ವರ್ಷದ ದರಸೂಚಿ ಅನುಗುಣವಾಗಿ ನಿರ್ವಹಣೆಯ ಅನುದಾನವು ಭಾಗಶಃ ಹೆಚ್ಚಳವಾಗಿದೆ. ಇದರ ಬಗ್ಗೆ ವಿವರಣೆ ತಂಖ್ತೆಯನ್ನು ಪ್ರತಿಯಲ್ಲಿ ಲಗತ್ತಿಸಲಾಗಿದೆ.

ANNEXURE TO UNSTARRED LAQ NO. 1834

DETAILS OF PROJECTWISE GRANT FROM INCEPTION OF THE PROJECT

(Rs. in lakhs)

Sl. No.	Year	Suvernavathy Project	Chickhole Project
1	2	3	4
1.	1968-69	15.00	1.00
2.	1969-70	20.00	1.00
3.	1970-71	50.50	0.00
4.	1971-72	30.00	0.00
5.	1972-73	20.00	0.00
6.	1973-74	5.00	0.00
7.	1974-75	10.00	15.00
8.	1975-76	5.00	47.50
9.	1976-77	10.00	50.00
10.	1977-78	10.00	90.00
11.	1978-79	10.00	63.00
12.	1979-80	5.00	45.00
13.	1980-81	5.00	20.00
14.	1981-82	0.00	15.00
15.	1982-83	0.00	1.00
16.	1983-84	1.00	1.00
17.	1984-85	1.00	0.00
18.	1985-86	1.68	6.80
19.	1986-87	3.00	7.86
20.	1987-88	3.12	8.80
21.	1988-89	3.12	10.05

L.A.Q.1834-13.

1	2	3	4
22.	1989-90	3.12	11.98
23.	1990-91	3.26	12.25
24.	1991-92	3.26	13.99
25.	1992-93	3.54	26.36
26.	1993-94	3.69	26.37
27.	1994-95	3.97	31.60
28.	1995-96	4.17	33.99
29.	1996-97	4.59	39.13
30.	1997-98	4.91	41.11
31.	1998-99	5.25	44.71

ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ವಿದ್ಯುತ್ ಕಡಿತದಿಂದಾಗಿ ಉಂಟಾಗಿರುವ ತೊಂದರೆ

1247 -ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಿಪಟೂರು ಚಿಕ್ಕನಾಯಕನಹಳ್ಳಿ, ತುರುವೇಕೆರೆ ಹಾಗೂ ಗುಬ್ಬಿ ತಾಲ್ಲೂಕುಗಳಿಗೆ ಕಿಬ್ಬನಹಳ್ಳಿ ವಿದ್ಯುತ್ ಸ್ಟೇಷನ್ನಿಂದ ವಿದ್ಯುತ್ ಸರಬರಾಜು ಮಾಡುತ್ತಿರುವುದು ನಿಜವೇ?

ಆ) ಇದರಿಂದ ವರ್ಷವಿಡಿ ವಿದ್ಯುತ್ ಪೂರೈಕೆಯಲ್ಲಿ ಅಸಮರ್ಪಕತೆ ಉಂಟಾಗಿ ಅಲ್ಲಿನ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳಾವುವು?

ಶ್ರೀ ಶರಣಬಸಪ್ಪದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ತಿಪಟೂರು, ಚಿಕ್ಕನಾಯಕನಹಳ್ಳಿ, ತುರುವೇಕೆರೆ ತಾಲ್ಲೂಕುಗಳಿಗೆ ಕಿಬ್ಬನಹಳ್ಳಿ 220 : 110 ಕೆ.ವಿ. ವಿದ್ಯುತ್ ಸ್ಟೇಷನ್‌ನಿಂದಲೂ ಹಾಗೂ ಗುಬ್ಬಿ ತಾಲ್ಲೂಕಿನ ಕೆಲವು ಭಾಗಗಳಿಗೆ ಕಿಬ್ಬನಹಳ್ಳಿ 220 : 110 ಕೆ.ವಿ. ವಿದ್ಯುತ್ ಸ್ಟೇಷನ್‌ನಿಂದಲೂ ಹಾಗೂ ಉಳಿದ ಕೆಲವು ಭಾಗಗಳಿಗೆ ಅಂತರಸನಹಳ್ಳಿಯಲ್ಲಿರುವ 220: 66 ಕೆ.ವಿ. ವಿದ್ಯುತ್ ಸ್ಟೇಷನ್‌ನಿಂದಲೂ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಆ) ಮತ್ತು ಇ) ತಿಪಟೂರು, ಚಿಕ್ಕನಾಯಕನಹಳ್ಳಿ, ತುರುವೇಕೆರೆ ಹಾಗೂ ಗುಬ್ಬಿ ತಾಲ್ಲೂಕುಗಳ ಗ್ರಾಮಾಂತರ ಪ್ರದೇಶಗಳಲ್ಲಿ ದಿನದಲ್ಲಿ ಒಟ್ಟು 10 ಘಂಟೆಗಳು 3 ಫೇಸ್ ವಿದ್ಯುತ್ ಸರಬರಾಜು